**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಅಖಿಲ್ ಹೆಚ್.ಎಸ್ | ಪ್ರಾಸಾ-4 |
| ತಂದೆಯ ಹೆಸರು | : ಸೋಮೇಶ್ ಹೆಚ್.ಪಿ | ಚಾಸಾ-5 |
| ವಯಸ್ಸು | : 35 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಹಾರ | ದಿನಾಂಕಃ 28.10.2025 |
| ವಾಸಸ್ಥಳ | : ಬಣಕಲ್ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-1 ಮತ್ತು 6 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-3 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-4 ರ ಫೋಟೋದಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ.

ದಿ.08.07.2023 ರಂದು ಸುಭಾಶ್ ನಗರದ ಚಾಸಾ-1 ಮತ್ತು 4 ರವರ ಮನೆಯ ಬಳಿ ಬೆ.11.00 ರಿಂದ 12.00 ರ ಸಮಯದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ಸದರಿ ಸಹಿಯನ್ನು ಆರೋಪಿಯು ಚಾಸಾ-1 ರವರೊಟ್ಟಿಗೆ ಅಸಬ್ಯವಾಗಿ ವರ್ತಿಸಿರುವ ಬಗ್ಗೆ ಚಾಸಾ-1 ರವರು ಪೋಲಿಸರಿಗೆ ತಿಳಿಸಿರುತ್ತಾರೆ , ಸದರಿ ಸಮಯದಲ್ಲಿ ನಾನು ನಿಪಿ-3 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನಿಪಿ-4 ನ್ನು ಸದರಿ ಸಮಯದಲ್ಲಿ ತೆಗೆಯಲಾಗಿರುತ್ತದೆ. ಸದರಿ ಸಮಯದಲ್ಲಿ ನನ್ನೊಟ್ಟಿಗೆ ಚಾಸಾ-1 ಮತ್ತು 6 ರವರು ಸಹಿಯನ್ನು ಮಾಡಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ**

ಪಂಚರಾಗಿ ಹಾಜರಾಗಲು ಪೋಲಿಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಾನು ನನ್ನ ಸಹೋದರನು ಅಂಗಡಿಗೆ ಹೋಗುವ ಸಮಯದಲ್ಲಿ ಪೋಲಿಸರು ಕರೆದಿರುತ್ತಾರೆ. ಚಾಸಾ-4 ರವರ ಮನೆಯ ಹತ್ತಿರ ನನ್ನ ಸಹೋದರನ ಕೋಳಿ ಅಂಗಡಿ ಇರುತ್ತದೆ. ಘಟನಾ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾ ಇದೆ ಎಂದರೆ ಸರಿಯಲ್ಲ. ಬಾರ್ ನಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾದಿಂದ ಘಟನಾ ಸ್ಥಳವು ಕಾಣುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-3 ರವರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಈ ದಿನ ಚಾಸಾ-3 ರವರು ನನ್ನನ್ನು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ಸ್ನೇಹಿತರು ಎಂದರೆ ಸರಿ. ನನ್ನ ಬಳಿ ಪೋಲೋ ಕಾರು ಇತ್ತು ಎಂದರೆ ಸರಿ. ಸದರಿ ಕಾರನ್ನು ಆರೋಪಿಯು ಸ್ನೇಹಿತರಾದ ಕಾರಣ ಉಪಯೋಗಿಸುತ್ತಿದ್ದರು ಎಂದರೆ ಸರಿ. ಆರೋಪಿಯು ಸದರಿ ಕಾರನ್ನು ಉಪಯೋಗಿಸುವ ಸಮಯದಲ್ಲಿ ಅಪಘಾತಕ್ಕೊಳಗಾಗಿತ್ತು

ಎಂದರೆ ಸರಿ. ಅದರ ಬಾಬ್ತು ಆರೋಪಿಯ ಬಳಿ ನಾನು ಹಣವನ್ನು ಕೇಳಿರುತ್ತೇನೆ ಎಂದರೆ ಸರಿ. ಆರೋಪಿಯು ನಾನು ಕೇಳಿದಷ್ಟು ಹಣ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಅಪಘಾತಕ್ಕೊಳಗಾದ ಕಾರನ್ನು ರಿಪೇರಿ ಮಾಡಿಸಿಕೊಡುವಂತೆ ನಾನು ಆರೋಪಿಯ ಬಳಿ ಕೇಳಿರುತ್ತೇನೆ. ನಂತರದಲ್ಲಿ ನಮ್ಮ ಮತ್ತು ಆರೋಪಿಯ ನಡುವೆ ವೈಮನಸ್ಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತಕ್ಕೊಳಗಾದ ಕಾರಿನ ನಷ್ಟಭರ್ತಿ ಪರಿಹಾರದ ಹಣವನ್ನು ನೀಡದೇ ಇದ್ದ ಕಾರಣ ಅವರೊಟ್ಟಿಗೆ ನಾನು ಮಾತುಕತೆಯನ್ನು ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ಕ್ಕೆ ನಾನು ಘಟನಾ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ನ್ನು ಘಟನಾ ಸ್ಥಳದಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಕಾರಿನ ಅಪಘಾತದ ಬಾಬ್ತು ವೈಮನಸ್ಸಿದ್ದ ಕಾರಣ ಚಾಸಾ-3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮಹಜರ್ ಕ್ರಮವನ್ನು ಪೋಲಿಸ್ ಸಿಬ್ಬಂಧಿಯು ಘಟನಾ ಸ್ಥಳದಲ್ಲಿ ಬರವಣಿಗೆ ಮಾಡಿರುತ್ತಾರೆ. ನಾನು ಆ ರೀತಿಯಾಗಿ ಯಾವುದೇ ಸಹಿಯನ್ನು ಮಾಡಿರುವುದಿಲ್ಲ. ಚಾಸಾ-3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ ಆದರೆ ಅಪಘಾತಕ್ಕೊಳಗಾದ ಕಾರಿನ ಬಾಬ್ತು ನಷ್ಟದ ಪರಿಹಾರವನ್ನು ಕೇಳಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ತಸ್ಲೀಮ | ಪ್ರಾಸಾ-5 |
| ತಂದೆಯ ಹೆಸರು | : ಯಾಕುಬ್ | ಚಾಸಾ-6 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ | ದಿನಾಂಕಃ 28.10.2025 |
| ವಾಸಸ್ಥಳ | : ಚಕಮಕ್ಕಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-1 ಮತ್ತು 5 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-3 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-4 ರ ಪೋಟೋದಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ.

ದಿ.08.07.2023 ರಂದು

ದಿ.08.07.2023 ರಂದು ಸುಭಾಶ್ ನಗರದ ಚಾಸಾ-4 ರವರ ಮನೆಯ ಬಳಿ ಬೆ.11.00 ರಿಂದ 12.15 ರ ಸಮಯದಲ್ಲಿ ಒಂದು ಮನೆಗೆ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಲು ಹೋದ ಸಮಯದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ನಿಪಿ-3 ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಆರೋಪಿಯು ಚಾಸಾ-1 ರವರಿಗೆ ತೊಂದರೆ ಕೊಟ್ಟಿರುವ ಬಾಬ್ತು ತೆಗೆದುಕೊಂಡಿರುತ್ತಾರೆ. ನಿಪಿ-4 ನ್ನು ಚಾಸಾ-1 ರವರ ಮನೆಯ ಬಳಿ ತೆಗೆದಿರುತ್ತಾರೆ. ಸದರಿ ಸಮಯದಲ್ಲಿ ನಾನು, ಚಾಸಾ-1 ಮತ್ತು 5 ರವರು ಸಹಿಯನ್ನು ಮಾಡಿರುತ್ತೇವೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ.ಯ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನಾನು ಆ ದಿನ ಸುಭಾಶ್ ನಗರದಲ್ಲಿರುವ ಚಾಸಾ-5 ರವರ ಸ್ನೇಹಿತರ ಮನೆಗೆ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಲು ಹೋಗಿರತ್ತೇವೆ. ಸದರಿ ಸಮಯದಲ್ಲಿ ಪೋಲಿಸರು ದೂರವಾಣಿ ಕರೆಯ ಮುಖಾಂತರ ನನ್ನನ್ನು ಕರೆದಿರುತ್ತಾರೆ. ಸುಭಾಶ್ ನಗರದಿಂದ ಘಟನಾ ಸ್ಥಳಕ್ಕೆ 100 ಮೀಟರ್ ಅಂತರವಿರುತ್ತದೆ. ಪಂಚರಾಗಿ ಹಾಜರಾಗಲು ಪೋಲಿಸರು ನನಗೆ ನೋಟೀಸನ್ನು ನೀಡಿರುತ್ತಾರೆ. ಪಂಚರಾಗಿ ಹಾಜರಾಗಲು ನೋಟೀಸನ್ನು ಠಾಣೆಯಲ್ಲಿ ನೀಡಿರುತ್ತಾರೆ. ನಿಪಿ-3 ಕ್ಕೆ ಸಹಿ ಮಾಡಿದ ನಂತರ ನಾನು ಠಾಣೆಗೆ ಹೋಗಿರುತ್ತೇನೆ, ಖಚಿತವಾದ ಸಮಯ ನೆನಪಿರುವುದಿಲ್ಲ. ಸದರಿ ಸಮಯದಲ್ಲಿ ಚಾಸಾ-5 ರವರು ನನ್ನೊಟ್ಟಿಗೆ ಬಂದಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-5 ರವರು

ನೋಟೀಸಿಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತಾರೆ. ಚಾಸಾ-3 ರವರು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-3 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ಘಟನಾ ಸ್ಥಳಕ್ಕೆ ಸಂಬಂಧಿಸಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೋಲಿಸರು ಬರವಣಿಗೆ ಮಾಡಿರುತ್ತಾರೆ.

ಚಾಸಾ-3 ನಮ್ಮ ಸ್ನೇಹಿತರ ಎಂದರೆ ಸರಿ. ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಸಹಿ ಮಾಡದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.